**ದಿನಾಂಕಃ 14.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಆರ್.ವಿ.ಕೆ. ವಕೀಲರಿಂದಃ-

1) ನಾನು ಬಿ.ಎ. ಪಧವೀಧರ. ಸಾಮಾನ್ಯವಾಗಿ ಯಾವುದೇ ಆಸ್ತಿಯನ್ನು ಖರೀದಿ ಮಾಡಬೇಕಾದರೆ ಮೂಲ ದಾಖಲಾತಿಯನ್ನು ನೋಡುತ್ತೇವೆ ಎಂದರೆ ಸರಿ. ದಾವಾ ಆಸ್ತಿಯನ್ನು ತನಗೆ ಯಾರು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು 3ನೇ ಪ್ರತಿವಾದಿ ವೆಂಕಟೇಶ್ ಎನ್ನುತ್ತಾರೆ. ದಾವಾ ಆಸ್ತಿಯು ಮೂಲತಃ ಚನ್ನಪಟ್ಟಣದ ಮಂಗಳವಾರಪೇಟೆಯ ಮೂಲ ಸರ್ವೆ ನಂ.542 ಕ್ಕೆ ಸೇರಿದ್ದದ್ದು ಎಂದರೆ ಸರಿ. ಸದರಿ ಸರ್ವೆ ನಂಬರ್ ನ ವಿಸ್ತೀರ್ಣ ಕರಾಬು 2 ಗುಂಟೆ ಸೇರಿಸಿ 1 ಎಕರೆ 24 ಗುಂಟೆ ಎಂದರೆ ಸರಿ. ಸರ್ವೆ ನಂಬರ್ 542 ಮೂಲತಃ ಚಿಕ್ಕಎಲಗಯ್ಯ ರವರಿಗೆ ಸೇರಿದ ಆಸ್ತಿ ಎಂದರೆ ಸರಿ. ಚಿಕ್ಕಎಲಗಯ್ಯ ರವರಿಂದ ವೆಂಕಟದಾಸಯ್ಯ ಗೇಣಿಗೆ ಸರ್ವೆ ನಂ. 542 ರ ಆಸ್ತಿಯನ್ನು ಪಡೆದುಕೊಂಡು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. 1970 ರಲ್ಲಿ ಸರ್ವೆ ನಂ.542 ರ 1 ಎಕರೆ 24 ಗುಂಟೆ ಪೈಕಿ 15 ಗುಂಟೆಯನ್ನು ಚಿಕ್ಕಎಲಗಯ್ಯ ರವರಿಂದ ವೆಂಕಟದಾಸಯ್ಯ ರವರ ಖರೀದಿ ಮಾಡಿದ್ದಾರೆ ಎಂದರೆ ಸರಿ. ಸದರಿ ಸರ್ವೆ ನಂಬರ್ ನಲ್ಲ ಇನ್ನುಳಿದ 1 ಎಕರೆ 9 ಗುಂಟೆ ಎಲ್.ಆರ್.ಎಫ್ 39/79-80 ರಂತೆ ವೆಂಕಟದಾಸಯ್ಯ ರಿಗೆ ಭೂನ್ಯಾಯ ಮಂಡಳಿಯಿಂದ ಮಂಜೂರಾಗಿರುತ್ತದೆ ಎಂದರೆ ಸರಿ. ತಾನು ಖರೀದಿ ಮಾಡಿದ 15 ಗುಂಟೆಸೇರಿಸಿ ಒಟ್ಟು 1 ಎಕರೆ 24 ಗುಂಟೆಯಲ್ಲಿ ವೆಂಕಟದಾಸಯ್ಯ ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿ.

2) ವೆಂಕಟದಾಸಯ್ಯ ತೀರಿಕೊಂಡ ನಂತರ ಆತನ ಕುಟುಂಬಸ್ಥರಾದ ಚನ್ನಮ್ಮ ಮತ್ತು ಮಕ್ಕಳು ಈ ಮೊದಲೇ ವೆಂಕಟದಾಸಯ್ಯ ಖರೀದಿ ಮಾಡಿದ 15 ಗುಂಟೆ ಜಮೀನನ್ನು ವಿ.ಬಿ.ಶ್ರೀಕಂಠಯವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ತದನಂತರ ಚನ್ನಮ್ಮ ತನ್ನ 4 ಜನ ಗಂಡುಮಕ್ಕಳಿಗೆ 1 ಎಕರೆ 9 ಗುಂಟೆ ಪೈಕಿ ತಲಾ 7 ಗುಂಟೆಯಂತೆ ಭಾಗ ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಚನ್ನಮ್ಮನ ಮಗಳಿಗೆ 1 ಗುಂಟೆಯನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಚನ್ನಮ್ಮಳ ಗಂಡು ಮಕ್ಕಳು ತಮಗೆ ಬಂದ ತಲಾ 7 ಗುಂಟೆ ಜಮೀನನ್ನು ಜಿಲ್ಲಾಧಿಕಾರಿ ರಾಮನಗರ ರವರ ಮುಂದೆ ಭೂಪರಿವರ್ತನೆ ಮಾಡಿಸಿಕೊಂಡಿದ್ದರು ಎಂದರೆ ಸರಿ.

3) ಯಾವುದೇ ಆಸ್ತಿಯನ್ನು ಭೂಪರಿವರ್ತನೆ ಮಾಡಬೇಕಾದರೆ ಜಿಲ್ಲಾಧಿಕಾರಿಯವರು ಸಂಬಂಧಪಟ್ಟ ತಾಲ್ಲೂಕಿನ ದಂಡಾಧಿಕಾರಿಗೆ ಕೇಸಿನ ಕಡತವನ್ನು ಪರಿಶೀಲಿಸುವಂತೆ ನಿರ್ದೇಶಿಸಿರುತ್ತಾರೆ ಎಂದರೆ ಸರಿ. 3ನೇ ಪ್ರತಿವಾದಿಗೆ 7 ಗುಂಟೆ ಭಾಗಕ್ಕೆ ಬಂದಿದ್ದು ಸದರಿ 7 ಗುಂಟೆಯನ್ನು ಭೂಪರಿವರ್ತನೆ ಮಾಡಿಸಿಕೊಂಡಿದ್ದು ಸದರಿ ಜಮೀನಿನ ಚಕ್ಕುಬಂದಿ ಗೊತ್ತಾ ಎಂದರೆ ಸಾಕ್ಷಿ 7 ಗುಂಟೆಗೆ ಚಕ್ಕುಬಂದಿ ನನಗೆ ಗೊತ್ತಿಲ್ಲ ಆದರೆ ನಾನು ಖರೀದಿ ಮಾಡಿದ ಸೈಟಿನ ಚಕ್ಕುಬಂದಿ ಮಾತ್ರ ನನಗೆ ಗೊತ್ತು ಎಂದು ನುಡಿಯುತ್ತಾರೆ. 3ನೇ ಪ್ರತಿವಾದಿಗೆ ಆದ 7 ಗುಂಟೆ ಭೂಪರಿವರ್ತನೆ ಜಾಗವನ್ನು ತನ್ನ ಸ್ವಂತಕ್ಕೆ ಹೊರತು ಮಾರಾಟಕ್ಕಲ್ಲ ಎಂದು ನಿಬಂಧನೆ ವಿಧಿಸಿ ಭೂಪರಿವರ್ತನೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಒಂದು ವೇಳೆ ತಮಗೆ ಆ 7 ಗುಂಟೆಯಲ್ಲಿ ಸೈಟನ್ನು ಮಾರಾಟ ಮಾಡಬೇಕಿದ್ದಿದ್ದರೆ ಜಿಲ್ಲಾಧಿಕಾರಿಗಳ ಅನುಮತಿ ಪಡೆದು ಮಾರಾಟ ಮಾಡಬೇಕಿತ್ತು ಎಂದರೆ ಸರಿಯಲ್ಲ. 3ನೇ ಪ್ರತಿವಾದಿಯು ತನ್ನ 7 ಗುಂಟೆ ವಿಸ್ತೀರ್ಣದಲ್ಲಿ ನಿವೇಶನಗಳಾಗಿ ಮಾಡಿದ ನಕ್ಷೆ ಏನಾದರೂ ಕೊಟ್ಟಿದ್ದಾರೆ ಎಂದರೆ ಹೌದು ಕೊಟ್ಟಿದ್ದಾರೆ ಎನ್ನುತ್ತಾರೆ. ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹೌದು ಎನ್ನುತ್ತಾರೆ. ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದೇ ಇದ್ದರೂ ಹೌದು ಎಂದು ಹೇಳುತ್ತೀರಾ ಎಂದರೆ ಇಲ್ಲ. 7 ಗುಂಟೆ ವಿಸ್ತೀರ್ಣದಲ್ಲಿ 3ನೇ ಪ್ರತಿವಾದಿ ಎಷ್ಟು ನಿವೇಶನಗಳಾಗಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಸಾಕ್ಷಿ ಮುಂದುವರೆದು ನನಗೆ 2 ನಿವೇಶನಗಳು ಬೇಕು ಎಂದು ನಾನು 2 ನಿವೇಶನಗಳನ್ನು 3ನೇ ಪ್ರತಿವಾದಿಯಿಂದ ಖರೀದಿ ಮಾಡಿರುತ್ತೇನೇ ಎಂದು ನುಡಿಯುತ್ತಾರೆ. ತಾವು ಖರೀದಿ ಮಾಡಿದ ಸೈಟಿನ ಪೂರ್ವಕ್ಕೆ 3ನೇ ಪ್ರತಿವಾದಿಗೆ ಸೇರಿದ ಉಳಿಕೆ ಸೈಟು, ಆ ಸೈಟಿನ ಪಶ್ಚಿಮಕ್ಕೆ ನಾನು ನಿವೇಶನಗಳನ್ನು ಖರೀದಿ ಮಾಡಿರುವುದು ಎಂದರೆ ಸರಿ. ತಾವು ಖರೀದಿಸಿದ ಪಶ್ಚಿಮಕ್ಕೆ ತಿರುಗಾಡುವ ರಸ್ತೆ ಇದೆ ಎಂದು ಹೇಳಿದ್ದು ತಾವು ಬಿಟ್ಟುಕೊಂಡಿದ್ದೀರೋ ಅಥವಾ 3ನೇ ಪ್ರತಿವಾದಿ ರಸ್ತೆ ಬಿಟ್ಟಿದ್ದರೋ ಎಂದು ಕೇಳಲಾಗಿ ಸಾಕ್ಷಿ 3ನೇ ಪ್ರತಿವಾದಿ ಬಿಟ್ಟಿದ್ದರು ಎಂದು ನುಡಿಯುತ್ತಾರೆ. ತಾವು ಖರೀದಿಸಿದ ಸೈಟಿನ ಪಶ್ಚಿಮಕ್ಕೆ 20 ಅಡಿ ರಸ್ತೆಯನ್ನು 3ನೇ ಪ್ರತಿವಾದಿ ಬಿಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಾವು ಖರೀದಿಸಿದ ಸೈಟಿನ ಉತ್ತರಕ್ಕೆ ಯಾರಿಗೆ ಸೇರಿದ ನಿವೇಶನ ಇದೆ ಎಂದರೆ ಸಾಕ್ಷಿಯು ಶ್ರೀನಿವಾಸಯ್ಯ ರವರಿಗೆ ಸೇರಿದ ಸೈಟು ಎನ್ನುತ್ತಾರೆ. ತಾವು ಖರೀದಿಸಿದ ಸೈಟಿನ ದಕ್ಷಿಣಕ್ಕೆ ತಿರುಗಾಡಲು ಬಿಟ್ಟಿರುವ 14 ಅಡಿ ರಸ್ತೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿಯ 7 ಗುಂಟೆಯ ಆಸ್ತಿಯ ಉತ್ತರಕ್ಕೆ ಅವರ ಸಹೋದರ ವೆಂಕಟಪ್ಪ ರವರ ಭಾಗಕ್ಕೆ ಬಂದ 7 ಗುಂಟೆ ಆಸ್ತಿ ಎಂದರೆ ಸರಿಯಲ್ಲ. 3ನೇ ಪ್ರತಿವಾದಿಯ 7 ಗುಂಟೆಯ ಆಸ್ತಿಯ ದಕ್ಷಿಣಕ್ಕೆ ಅವರ

ಸಹೋದರ 7ನೇ ಪ್ರತಿವಾದಿ ಹನುಮಂತ ರವರ ಭಾಗಕ್ಕೆ ಬಂದ 7 ಗುಂಟೆ ಆಸ್ತಿ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದು ನನಗೆ ಕೊಟ್ಟಿರುವ ಸೈಟಿನ ದಕ್ಷಿಣ ಭಾಗಕ್ಕೆ 14 ಅಡಿ ಅಗಲದ ರಸ್ತೆ ಇದೆ ಎನ್ನುತ್ತಾರೆ. ತಾವು ಖರೀದಿಸಿದ ಸೈಟಿನ ಪಶ್ಚಿಮಕ್ಕೆ 20 ಅಡಿ ರಸ್ತೆ, ದಕ್ಷಿಣಕ್ಕೆ 14 ಅಡಿ ಅಗಲದ ರಸ್ತೆ ಇವೆ ಎಂದು ತೋರಿಸಲು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಹಾಜರುಪಡಿಸದೇ ಇದ್ದರೂ ಹಾಜರುಪಡಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4) ದಾವಾ ಆಸ್ತಿಯನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ನಾನು ಸುಳ್ಳು ಚಕ್ಕುಬಂಧಿಯನ್ನು ನಮೂದಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. 28 ಗುಂಟೆ ಕಳೆದು ಸರ್ವೆ ನಂ. 542 ರಲ್ಲಿ 21 ಗುಂಟೆ ಪಶ್ಚಿಮ ಭಾಗಕ್ಕೆ ಉಳಿದುಕೊಳ್ಳುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿಯರು ತಮ್ಮ ಸಹೋದರಿಗೆ ನೀಡಿದ 1 ಗುಂಟೆಯನ್ನು ಹೊರತುಪಡಿಸಿ ಇನ್ನೆಲ್ಲಾ ಆಸ್ತಿಯನ್ನು ಆ ಸರ್ವೆ ನಂಬರ್ ಅನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. 28 ಗುಂಟೆ ಭೂಪರಿವರ್ತನೆ ಆದ ನಂತರ ಇನ್ನುಳಿಕೆ 21 ಗುಂಟೆ ಮೂಲ ಖಾತೆದಾರರ ಹೆಸರಿಗೆ ಉಳಿದುಕೊಂಡಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕಂದಾಯ ಅಧಿಕಾರಿಗಳ ತಪ್ಪಿ ನಿಂದ ಖಾತೆ ತಪ್ಪಾಗಿ ನಮೂದಾಗುತ್ತಾ ಬಂದಿರುತ್ತದೆ ಎನ್ನುತ್ತಾರೆ. ಮೂಲ ಖಾತೆದಾರರಾದ ಚನ್ನಮ್ಮ ಇನ್ನುಳಿಕೆ 21ಗುಂಟೆ ಜಮೀನನ್ನು ತನ್ನ ಹೆಸರಿಗೆ ಖಾತೆ ಮಾಡಿಕೊಡುವಂತೆ ತಾಲ್ಲೂಕು ಕಚೇರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರಿಗೆ 1 ಗುಂಟೆ ಬಿಟ್ಟು ಇನ್ನುಳಿಕೆ ಯಾವುದೇ ಜಮೀನು ಇಲ್ಲ ಎನ್ನುತ್ತಾರೆ. ಚನ್ನಮ್ಮ ಖಾತೆ ಮಾಡುವಂತೆ ಅರ್ಜಿ ಕೊಟ್ಟಿದ್ದರಿಂದ ತಾಲ್ಲೂಕು ಕಚೇರಿಯಲ್ಲಿ ತಾವು ಉಪವಿಭಾಗಾಧಿಕಾರಿ ಮುಂದೆ ಮೇಲ್ಮನವಿ ಸಲ್ಲಿಸಿಕೊಳ್ಳಿ ಎಂದು ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕಂದಾಯ ಅಧಿಕಾರಿಗಳ ತಪ್ಪಿ ನಿಂದ ಚನ್ನಮ್ಮನ ಹೆಸರಿಗೆ 21 ಗುಂಟೆ ಜಮೀನು ಹಾಗೆ ಉಳಿದುಕೊಂಡಿದ್ದರಿಂದ ಇದನ್ನು ಹೇಗಾದರೂ ಮಾಡಿ ಲಪಟಾಯಿಸಬೇಕೆಂಬ ಉದ್ದೇಶದಿಂದ ಅರ್ಜಿಯನ್ನು ಸಲ್ಲಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

5) ನಂತರ ಚನ್ನಮ್ಮನ ಮಗಳ ಮಹಾಲಕ್ಷ್ಮಿ ಉಪವಿಭಾಗಾಧಿಕಾರಿಯ ಮುಂದೆ ಅರ್.ಎ.240/2021-22 ರಂತೆ ದಾಖಲು ಮಾಡಿದ್ದು ಮಾನ್ಯ ಉಪವಿಭಾಗಾಧಿಕಾರಿಗಳು ಸದರಿ ಮೇಲ್ಮನವಿಯನ್ನು ಪುರಸ್ಕೃತಗೊಳಿಸಿ ತಾಲ್ಲೂಕು ದಂಡಾಧಿಕಾರಿ ಚನ್ನಪಟ್ಟಣವರಿಗೆ

ದಾಖಲೆ ಪರಿಶೀಲಿಸಿ ಚನ್ನಮ್ಮಳ ಹೆಸರಿಗೆ 21 ಗುಂಟೆ ಖಾತೆ ಮಾಡುವಂತೆ ಆದೇಶಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ಅಲ್ಲಿ ಚನ್ನಮ್ಮಳ ಹೆಸರಿಗೆ ಖಾತೆ ಮಾಡಲು ಆಸ್ತಿ ಇರುವುದಿಲ್ಲ ಎನ್ನುತ್ತಾರೆ. ಉಪವಿಭಾಗದಿಕಾರಿ ಆದೇಶದಿಂದ ತಾಲ್ಲೂಕು ದಂಡಾಧಿಕಾರಿ ಚನ್ನಪಟ್ಟಣವರು ತಮ್ಮ ಕಚೇರಿ ಆರ್.ಆರ್.ಟಿ. 273/2021-2022 ರಂತೆ ಪ್ರಕರಣ ದಾಖಲು ಮಾಡಿಕೊಂಡು ಸ್ಥಳ ಪರಿಶೀಲನೆ ಮಾಡಿ ನಕ್ಷೆ ತಯಾರಿಸಿ ಚನ್ನಮ್ಮಳ ಹೆಸರಿಗೆ 21 ಗುಂಟೆಗೆ ಖಾತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2022 ರಿಂದ ಈವರೆಗೂ 21 ಗುಂಟೆ ಆಸ್ತಿಯು ಚನ್ನಮ್ಮಳ ಹೆಸರಿಗೆ ಪಹಣಿ ಪತ್ರಿಕೆಯಲ್ಲಿ ನಮೂದಾಗುತ್ತಾ ಬಂದಿರುತ್ತದೆ ಎಂದರೆ ಸಾಕ್ಷಿಯು ಕಂದಾಯ ಅಧಿಕಾರಿಗಳ ತಪ್ಪಿ ನಿಂದ ಖಾತೆ ಚನ್ನಮ್ಮಳ ಹೆಸರಿಗೆ ಬರುತ್ತಿರಬಹುದು ಎಂದು ನುಡಿಯುತ್ತಾರೆ.

6) ನಾನು, ರಮೇಶ, ಮಾಯಿಗೌಡ, ಪ್ರಕಾಶ ರವರುಗಳು ಸೇರಿ ಚನ್ನಮ್ಮಳ ಹೆಸರಿಗೆ ಖಾತೆ ಆಗಿರುವುದನ್ನು ಪ್ರಶ್ನಿಸಿ ಎಸಿ ರವರ ಮುಂದೆ ಖಾತೆ ರದ್ದು ಮಾಡುವಂತೆ ಮೇಲ್ಮನವಿ ಸಲ್ಲಿಸಿದ್ದೆವು ಎಂದರೆ ಸಾಕ್ಷಿಯು ಸದರಿ ಸರ್ವೆ ನಂಬರ್ 542 ನಲ್ಲಿ ಚನ್ನಮ್ಮಳ ಹೆಸರಿಗೆ ಯಾವುದೇ ಜಮೀನು ಉಳಿದಿಲ್ಲ ಹಾಗಾಗಿ 21 ಗುಂಟೆ ಜಮೀನನ್ನು ಚನ್ನಮ್ಮಳ ಹೆಸರಿಗೆ ಖಾತೆ ಮಾಡಬಾರದೆಂದು ಅರ್ಜಿ ಸಲ್ಲಿಸಿದ್ದರು ಎಂದು ನುಡಿಯುತ್ತಾರೆ. ನಂತರ ನಾವು ಸಲ್ಲಿಸಿದ ಅರ್ಜಿಯನ್ನು ಉಪವಿಭಾಗದಿಕಾರಿ, ರಾಮನಗರ ರವರು ವಜಾ ಗೊಳಿಸಿ ಸಂಬಂಧಪಟ್ಟ ಸಿವಿಲ್ ನ್ಯಾಯಾಲಯದಲ್ಲಿ ಬಗೆ ಹರಿಸಿಕೊಳ್ಳಿ ಎಂದು ಆದೇಶಿಸಿರುತ್ತಾರೆ ಎಂದರೆ ಸಾಕ್ಷಿಯು ನಾವು ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿಲ್ಲ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದರು ಎಂದು ನುಡಿಯುತ್ತಾರೆ. ಸರ್ವೆ ನಂಬರ್ 542 ರಲ್ಲಿ ಉಳಿಕೆ 21 ಗುಂಟೆ ಜಮೀನಿನ ಸುತ್ತಾ ಪ್ರತಿವಾದಿಯರು ಕಲ್ಲುಕಂಬ ನೆಟ್ಟಿದ್ದು ಅದನ್ನು ನಾಶಗೊಳಿಸಲು ನಾನು, ರಮೇಶ, ಮಾಯಿಗೌಡ, ಪ್ರಕಾಶ ರವರುಗಳು ಮುಂದಾಗಿದ್ದೆವು ಎಂದರೆ ಸಾಕ್ಷಿಯು ತಂತಿಬೇಲಿಯನ್ನು ನಾವೇ ಹಾಕಿಸಿದ್ದೆವು ಎಂದು ನುಡಿಯುತ್ತಾರೆ.

7) 3ನೇ ಪ್ರತಿವಾದಿಯು ತನ್ನ ಹಿಸ್ಸೆಗೆ ಬಂದಿದ್ದ 7 ಗುಂಟೆ ಜಮೀನಿನಲ್ಲಿ ಭೂಪರಿವರ್ತನೆ ಆದ ಸೈಟುಗಳನ್ನು ನಮಗೆ ಮಾರಿಲ್ಲ ಎಂದರೆ ಸರಿಯಲ್ಲ. ನಿಪಿ.8 ರಲ್ಲಿ ಸರ್ವೆ ನಂಬರ್ 542 ರಲ್ಲಿ 9 ಗುಂಟೆ ಜಮೀನಿಗೆ ಭೂಪರಿವರ್ತನೆ ಆಗಿದೆ ಎಂದು ನಮೂದೆ ಆಗಿದೆ ಎಂದರೆ ಸಾಕ್ಷಿಯು ಇಲ್ಲ 7 ಗುಂಟೆ ಎಂದು ನುಡಿಯುತ್ತಾರೆ. ನಿಪಿ.8 ರಿಂದ 10 ಗ್ರಾಮ ಪಂಚಾಯಿತಿ ಅಧಿಕಾರಿಗಳ ಜೊತೆ ಶಾಮೀಲಾಗಿ ಸೃಷ್ಟಿ ಮಾಡಿಕೊಂಡ ದಾಖಲೆಗಳು ಎಂದರೆ ಸರಿಯಲ್ಲ.

7 ಗುಂಟೆ ಜಾಗದಲ್ಲಿ 9 ಸೈಟುಗಳನ್ನು ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ, 3ನೇ ಪ್ರತಿವಾದಿ ನನಗೆ 2 ಸೈಟುಗಳನ್ನು ತನ್ನ ಭಾಗಕ್ಕೆ ಬಂದ ಜಾಗದಲ್ಲಿ ಮಾರಿರುತ್ತಾರೆ ಎಂದು ನುಡಿಯುತ್ತಾರೆ. ಭೂಪರಿವರ್ತನೆ ಆದ ಜಾಗವನ್ನು ಬಿಟ್ಟು ಪ್ರತಿವಾದಿಯರ ಕುಟುಂಬಕ್ಕೆ ಉಳಿದುಕೊಂಡಿದ್ದ 21 ಗುಂಟೆ ಜಾಗದಲ್ಲಿ ನಾನು ಸೈಟುಗಳನ್ನು ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 542 ರಲ್ಲಿ ಉಳಿಕೆ 19 ಗುಂಟೆ ಜಮೀನು ಪ್ರತಿವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ ಸರ್ವೆ ನಂಬರ್ ನಲ್ಲಿ ಉಳಿಕೆ 19 ಗುಂಟೆ ಕೃಷಿ ಜಮೀನು ಯಾರಿಗೂ ಮಾರಾಟವಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ವಿರುದ್ದ ಸುಳ್ಳು ಕೇಸು ದಾಖಲೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ